
# ಬೆಳಕಿನ ಸಂಚಲನ

ಸಂ 2, ಸಂ 10 ಫೆಬ್ರವರಿ 2015



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

ಒಬ್ಬ ಅಸ್ವಸ್ಥ ವ್ಯಕ್ತಿಗೆ ಕೆಳ ಹೊಟ್ಟೆಯಲ್ಲಿ ನೋವಿತ್ತು. ಅವರು ತಮ್ಮನ್ನು ಹೀಲ್ ಮಾಡಿಕೊಳ್ಳಲು ಬೆಳಕನ್ನು ಚಾನಲ್ ಮಾಡಲಾರಂಭಿಸಿದರು. ಬೆಳಕನ್ನು ನೋವಿದ್ದ ಭಾಗಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲವೆಂದು ಅದು ಹೇಗೋ ಅವರಿಗೆ ತಿಳಿಯಿತು. ಅದು ಆಶ್ಚರ್ಯಕರವಾಗಿತ್ತು. ಇಂತಹ ಪ್ರಸಂಗ ನನ್ನ ಗಮನಕ್ಕೆ ಬಂದಿದ್ದು ಕೂಡ ಇದೇ ಮೊದಲ ಸಲ. ಅವರಿಗೆ ಬೆಳಕನ್ನು ನೋವಿದ್ದ ಭಾಗಕ್ಕೆ ತೆಗೆದುಕೊಂಡು ಹೋಗಲು ಕಷ್ಟವಾಗುತ್ತಿರುವುದನ್ನು ಪರಿಶೀಲಿಸಿ ತಿಳಿದುಕೊಂಡೆ. ನಂತರ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ ಹಾಗೂ ಕರ್ಮಗಳು ಅಡ್ಡಿಯಾಗಿರುವುದನ್ನು ನೋಡಿದೆ.

ಅಂತಹ ಸಮಯದಲ್ಲಿ ನಾವು ಏನು ಮಾಡಬೇಕು? ಅಭ್ಯಾಸವನ್ನು ಬಿಡದೆ ಮುಂದುವರೆಸಬೇಕು. ನಾವು ಕರ್ಮವನ್ನು ಸಹ ಪ್ರಾರ್ಥಿಸಬೇಕು. ಕರ್ಮಗಳೂ ಸಹಾಯ ಮಾಡುತ್ತವೆ. "ದಯವಿಟ್ಟು ಬೆಳಕನ್ನು ನೋವಿರುವ ಭಾಗಕ್ಕೆ ತೆಗೆದುಕೊಂಡು ಹೋಗಲು ಸಹಾಯ ಮಾಡಿ. ಈ ಅನಾರೋಗ್ಯ ಹಾಗೂ ನೋವಿನಿಂದ ನಾನು ಗುಣ ಹೊಂದಲಿ" ಎಂದು ನಾವು ಕರ್ಮಗಳಿಗೆ ಹೇಳಬಹುದು. ಕರ್ಮಗಳು ಸಹಕರಿಸುತ್ತವೆ ಹಾಗೂ ಸಹಾಯ ಮಾಡುತ್ತವೆ. ನಂತರ ಬೆಳಕನ್ನು ಒಳಗೆ ತೆಗೆದುಕೊಳ್ಳುವಂತೆ ಶರೀರವನ್ನು ಪ್ರಾರ್ಥಿಸಿ. ಈ ಅಭ್ಯಾಸವನ್ನು ಬಿಡದೆ ಮುಂದುವರೆಸಿ, ನೀವು ಗುಣವಾಗುವಿರಿ.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ನಮ್ಮ ಕಾರ್ಯಕರ್ತರೊಬ್ಬರು ಒಂದು ಲೈಟ್ ಚಾನಲ್ ಸೆಷನ್‌ಗಾಗಿ ಬೆಳಗಿನ ಸಮಯದಲ್ಲಿ ಒಂದು ಶಾಲೆಗೆ ಹೋಗಬೇಕಾಗಿತ್ತು. ಹೊರಡಲು ತಯಾರಾದಾಗ, ಕಾರಿನಲ್ಲಿ ಪೆಟ್ರೋಲ್ ಇಲ್ಲದೆ ಇರುವುದು ನೆನಪಿಗೆ ಬಂತು. ಅವರು ಪ್ರಾರ್ಥನೆ ಮಾಡಿ ಕಾರನ್ನು ಸ್ಟಾರ್ಟ್ ಮಾಡಿದರು, ಅದು ಸ್ಟಾರ್ಟ್ ಆಯಿತು! ಆ ಶಾಲೆಯಲ್ಲಿ ಸೆಷನ್ ಮುಗಿಸಿದ ನಂತರ ಪುನಃ ಸ್ಟಾರ್ಟ್ ಮಾಡಿದರು, ಅದು ಪುನಃ ಸ್ಟಾರ್ಟ್ ಆಯಿತು! ಹತ್ತಿರದ ಪೆಟ್ರೋಲ್ ಬಂಕ್‌ನಿಂದ ಕೆಲವೇ ಮೀಟರ್ ದೂರದಲ್ಲಿ ಬಂದು ಅದು ನಿಂತಿತು!

ಅಂತಹ ಕಳವಳದ ಕ್ಷಣಗಳು, ಸವಾಲುಗಳು ಮತ್ತು ವಿಶ್ವದಿಂದ ಸಿಗುವ ಸಹಾಯದ ಅನುಭವಗಳು, ಈ ಲೈಟ್ ಚಾನಲಿಂಗ್ ಕೆಲಸವನ್ನು ಅತ್ಯಂತ ರೋಮಾಂಚಕ ಹಾಗೂ ತೃಪ್ತಿನೀಡುವ ಕೆಲಸವನ್ನಾಗಿ ಮಾಡುತ್ತವೆ.

ವಿಶ್ವದಿಂದ ಬರುವ ಅಂತಹ ಸಹಾಯ ಮತ್ತು ಅನುಗ್ರಹದಿಂದ, ನಮ್ಮ ಕಾರ್ಯಕರ್ತರು ಇಲ್ಲಿಯ ತನಕ 4865 ಶಾಲೆಗಳ ಸುಮಾರು 27 ಲಕ್ಷ ಮಕ್ಕಳಿಗೆ ಲೈಟ್ ಚಾನಲಿಂಗ್‌ಅನ್ನು ಕಲಿಸಿದ್ದಾರೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ನಮ್ಮ ಉದ್ದೇಶಗಳು ಪರಿಶುದ್ಧವಾಗಿದ್ದಾಗ ಹಾಗೂ ನಿಸ್ವಾರ್ಥವಾಗಿ ನಾವು ಕೆಲಸ ಮಾಡಿದಾಗ ನಮ್ಮ ಗುರಿಯನ್ನು ತಲುಪಲು ಇಡೀ ವಿಶ್ವವೇ ಸಹಾಯ ಮಾಡುತ್ತದೆ ಎಂದು ನಮ್ಮ ಗುರೂಜಿಯವರು ಹೇಳುತ್ತಿದ್ದರು. ವಿಶ್ವ ಚಾನಲ್ಸ್ ದಿನದಂದು ಲೈಟ್ ಚಾನಲಿಂಗ್ ತಂಡಕ್ಕೆ ಸಹ ವಿಶ್ವದಿಂದ, ಅಪರಿಚಿತ ಮೂಲಗಳ ಮುಖಾಂತರ ಅಪಾರವಾದ ಸಹಾಯ ಮತ್ತು ಅನುಗ್ರಹವನ್ನು ಪಡೆದ ಅನುಭವವಾಯಿತು. ಅನೇಕ ತೊಂದರೆ ಮತ್ತು ಸವಾಲುಗಳಿದ್ದರೂ ಕೂಡ ಆ ದಿನ ನಾವು ಅತಿ ಹೆಚ್ಚು ಮಕ್ಕಳಿಂದ ಲೈಟ್ ಚಾನಲ್ ಮಾಡಿಸಲು ಸಾಧ್ಯವಾಯಿತು.

ನಿಸ್ವಾರ್ಥದಿಂದ ಕೆಲಸ ಮಾಡಿದ ನಮ್ಮ ಕಾರ್ಯಕರ್ತರಿಗೆ ಪ್ರತಿಫಲವಾಗಿ ಬೆಲೆಕಟ್ಟಲಾಗದ ಪ್ರೀತಿ ಮತ್ತು ಆನಂದದ ಉಡುಗೊರೆಗಳು ದೊರೆತವು. ವಿಶ್ವ ಚಾನಲ್ಸ್ ದಿನವು ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಂತೋಷದಾಯಕ ಹಾಗೂ ಮರೆಯಲಾಗದ ಕ್ಷಣವಾಗಿತ್ತು.

ಈ ಸಂಚಲನಕ್ಕೆ ನೀಡುತ್ತಿರುವ ಅಪರಿಮಿತವಾದ ಬೆಂಬಲಕ್ಕಾಗಿ, ಶಾಲಾ ಅಧಿಕಾರಿಗಳು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ನಾವು ವಂದನೆಗಳನ್ನು ಸಲ್ಲಿಸುತ್ತೇವೆ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 4 PM)
ಇ–ಮೇಲ್ : info@lightagemasters.com info@lightchannels.com
ವೆಬ್‌ಸೈಟ್ : www.lightagemasters.com www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

### ಬೆಂಗಳೂರು

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ.
890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಕಾರ್ತಿಕ್ ಎನ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೇಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



30–1–2015 ರಂದು ಆಚರಿಸಲಾದ ವಿಶ್ವ ಚಾನಲ್ಸ್ ದಿನದ ತಮ್ಮ ಅನುಭವಗಳನ್ನು ಹಂಚಿಕೊಳ್ಳಲು, 85 ಕ್ಕೂ ಹೆಚ್ಚು ಲೈಟ್ ಚಾನಲ್ ಕಾರ್ಯಕರ್ತರು 15–02–2015 ರಂದು ಒಟ್ಟಿಗೆ ಸೇರಿದ್ದರು.

## ಪ್ರಮುಖ ಘಟನೆಗಳು

- ಜನವರಿ 30, 2015, ಐದನೇ ವಿಶ್ವ ಚಾನಲ್ಸ್ ದಿನ – ಭಾರತದಾದ್ಯಂತ 2350 ಶಾಲೆಗಳ 11 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜನವರಿ 31, 2014, ನಾಲ್ಕನೇ ವಿಶ್ವ ಚಾನಲ್ಸ್ ದಿನ – ಭಾರತದಾದ್ಯಂತ 2100 ಶಾಲೆಗಳ 10 ಲಕ್ಷಕ್ಕೂ ಹೆಚ್ಚು ಮಕ್ಕಳು ಮತ್ತು ಶಿಕ್ಷಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜೂನ್ 29, 2013 – ಬೆಂಗಳೂರು, ಮೈಸೂರು, ಹೈದ್ರಾಬಾದ್, ಸಾಂಗ್ಲಿಯಲ್ಲಿನ 30 ಶಾಲೆಗಳಲ್ಲಿ ಮತ್ತು ಭಾರತದಾದ್ಯಂತ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ 13,449 ಮಕ್ಕಳು ಲೈಟ್ ಚಾನಲಿಂಗ್ ಮಾಡಿದರು.
- ಫೆಬ್ರವರಿ 1, 2013, ಮೂರನೇ ವಿಶ್ವ ಚಾನಲ್‌ಗಳ ದಿನ – ಭಾರತದಾದ್ಯಂತ 1868 ಶಾಲೆಗಳ ಸುಮಾರು 8.86 ಲಕ್ಷ ಮಕ್ಕಳು ಮತ್ತು ಅಧ್ಯಾಪಕರು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಮೇ 7, 2012 – ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಆಯೋಜಿಸಿದ್ದ ಲೈಟ್ ಚಾನಲ್‌ಗಳ ಸಮಾವೇಶದಲ್ಲಿ ಸುಮಾರು ಒಂದು ಸಾವಿರ ಜನರು ಸೇರಿದ್ದರು. ಪ್ರಪಂಚದಾದ್ಯಂತ ಸಾವಿರಾರು ಜನರು ವೆಬ್‌ಕಾಸ್ಟ್ ಮತ್ತು ಮನೋಸಂಪರ್ಕಗಳ ಮೂಲಕ ತಮ್ಮ ತಮ್ಮ ಸ್ಥಳದಿಂದಲೇ ಭಾಗವಹಿಸಿ 15 ನಿಮಿಷಗಳ ಕಾಲ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2012, ವಿಶ್ವ ಚಾನಲ್‌ಗಳ ದಿನ – ನೂರಾರು ಶಾಲೆಗಳ 6 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡುವುದರ ಮೂಲಕ ಈ ದಿನವನ್ನು ಯಶಸ್ವಿಗೊಳಿಸಿದರು.
- ಜನವರಿ 18, 2012 – ಬೆಂಗಳೂರು, ಪುಣೆ, ಚೆನ್ನೈ ಮತ್ತು ಮಂಗಳೂರಿನ 11, 570 ಮಕ್ಕಳು 16 ವಿವಿಧ ಸೆಷನ್‌ಗಳಲ್ಲಿ ಲೈಟ್ ಚಾನಲ್ ಮಾಡಿದರು.
- ಫೆಬ್ರವರಿ 1, 2011, ವಿಶ್ವ ಚಾನಲ್‌ಗಳ ದಿನ – 130 ಸ್ವಯಂಸೇವಕರು ಭಾರತದಾದ್ಯಂತ ಸುಮಾರು 600 ಶಾಲೆಗಳಲ್ಲಿನ 4 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿಸಿದರು.

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4865 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 26.83 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ವಿಶ್ವ ಚಾನಲ್ಸ್ ದಿನ

**ಮನೋಜ್ ಕುಮಾರ್ ಚೋಪ್ರ; ಅನು: ವರ್ಷ ದೀಪಕ್**

5ನೇ 'ವಿಶ್ವ ಚಾನಲ್ಸ್ ದಿನ'ವು ನಮಗೆಲ್ಲರಿಗೂ ಬಹಳ ಅದ್ಭುತ ಅನುಭವವಾಗಿತ್ತು. ಹಿಂದಿನ ಎಲ್ಲಾ ವರ್ಷಗಳಿಗೆ ಹೋಲಿಸಿದರೆ ಇದು ಅತಿ ಹೆಚ್ಚಿನ ಸವಾಲು ಹಾಗೂ ಪ್ರತಿಫಲಗಳಿಂದ ಕೂಡಿತ್ತು. ಬೆಳಕಿನ ಅದೃಶ್ಯ ಕೈಗಳಿಂದ ಬರುತ್ತಿದ್ದ ಅನುಗ್ರಹ ಮತ್ತು ಸಹಾಯವು ಇಡೀ ದಿನ ಅನುಭವಕ್ಕೆ ಬಂತು. ಇದು ನಮ್ಮ ಜೀವನದಲ್ಲಿ ಒಂದು ಮರೆಯಲಾಗದ ದಿನ.

ಲೈಟ್ ಚಾನಲ್ ಕಾರ್ಯಕರ್ತರ ಮೀಟಿಂಗ್‌ನಲ್ಲಿ ಗುರೂಜಿಯವರಿಗೆ, ಅಮರರವರಿಗೆ, ವಿಶ್ವಾಮಿತ್ರ ಮಹರ್ಷಿ ಮತ್ತು ಋಷಿಗಳಿಗೆ ಪ್ರಾರ್ಥಿಸಿಕೊಂಡ ನಂತರ 'ವಿಶ್ವ ಚಾನಲ್ಸ್ ದಿನ'ದ ಯೋಜನೆಯು ಸುಮಾರು ಎರಡು ತಿಂಗಳ ಹಿಂದೆಯೇ ಆರಂಭವಾಯಿತು. ಈ ಮೀಟಿಂಗ್ ನಂತರ ಪ್ರಾದೇಶಿಕ ತಂಡಗಳ ಮೀಟಿಂಗ್‌ಗಳು ಜರುಗಿದವು. 2000 ಕ್ಕೂ ಹೆಚ್ಚು ಶಾಲೆಗಳಿಗೆ ನಾವು ಹೋಗಬೇಕಿತ್ತು ಮತ್ತು ನಮ್ಮಲ್ಲಿದ್ದ ಕಾರ್ಯಕರ್ತರ ಸಂಖ್ಯೆ ಸೀಮಿತವಾಗಿತ್ತು. ಏಕಾಏಕಿ, ನಮ್ಮ ಕಾರ್ಯಕರ್ತರು ತಮ್ಮನ್ನು ತಾವು ಈ ಕೆಲಸದಲ್ಲಿ ಹೆಚ್ಚು ತೊಡಗಿಸಿಕೊಂಡಿರುವುದನ್ನು ನಾವು ಅರಿತೆವು. ಹಲವರು ಬಹಳ ಅತ್ಯಮೂಲ್ಯವಾದ ಸಲಹೆಗಳನ್ನು ನೀಡಿದರು. ತಮ್ಮ ವೈಯಕ್ತಿಕ ಸಮಸ್ಯೆಗಳು ಮತ್ತು ಆರೋಗ್ಯದ ತೊಂದರೆಗಳಿದ್ದರೂ ಕೂಡಾ ಅನೇಕರು ಮುಂದೆ ಬಂದು ಹೆಚ್ಚಿನ ಜವಾಬ್ದಾರಿಗಳನ್ನು ತೆಗೆದುಕೊಂಡರು. ನಮ್ಮ ಪ್ರಾದೇಶಿಕ ಸಂಘಟಕರು ಅತ್ಯಂತ ನಿಖರವಾಗಿ ಯೋಜನೆಗಳನ್ನು ಮಾಡಿದ್ದರು. ತಮ್ಮ ಕ್ಷೇತ್ರವನ್ನು ಸಣ್ಣ ಸಣ್ಣ ಪ್ರದೇಶಗಳಾಗಿ ವಿಂಗಡಿಸಿದ್ದರು ಹಾಗೂ ಅದರ ಜವಾಬ್ದಾರಿಗಳನ್ನು ಆಯಾ ಪ್ರದೇಶದ ತಂಡದ ಸದಸ್ಯರಿಗೆ ವಹಿಸಿ ಕೊಟ್ಟಿದ್ದರು. ತಂಡದ ಸದಸ್ಯರು ಪ್ರತಿ ದಿನ ತಮ್ಮ ಪ್ರಾದೇಶಿಕ ಸಂಘಟಕರಿಗೆ ವರದಿ ನೀಡುತ್ತಿದ್ದರು. ಈ ವಿಶೇಷ ದಿನಕ್ಕಾಗಿ ಅತಿ ನಿಖರವಾದ ಯೋಜನೆಯನ್ನು ರೂಪಿಸಲು ಪ್ರಾದೇಶಿಕ ಸಂಘಟಕರಿಗೆ ಇದು ಸಹಾಯವಾಯಿತು.

'ವಿಶ್ವ ಚಾನಲ್ಸ್ ದಿನ'ವು ನಮ್ಮ ಪ್ರೀತಿಯ ಮಾಸ್ಟರ್ ಮಹರ್ಷಿ ಅಮರರವರಿಗೆ ಸಮರ್ಪಿತವಾಗಿದೆ. ಆ ದಿನ ಚಾನಲ್ ಮಾಡಿದ ಬೆಳಕನ್ನು ಪ್ರತಿ ವರ್ಷ ನಾವು ಅತ್ಯಂತ ವಿನಯಪೂರ್ವಕವಾಗಿ ಅಮರರವರಿಗೆ ಅವರ ಜನ್ಮದಿನದ ಉಡುಗೊರೆಯಾಗಿ ನೀಡುತ್ತೇವೆ. ಪ್ರತಿ ಕಾರ್ಯಕರ್ತನಿಗೂ ಈ ದಿನದ ಪ್ರಾಮುಖ್ಯತೆ ತಿಳಿದಿದೆ. ಅವರು ತಮ್ಮ ಶಕ್ತಿಮೀರಿ ಕೆಲಸ ಮಾಡಲು ಬಯಸಿದರು. ಅನೇಕ ಕಾರ್ಯಕರ್ತರು ಅಂದು ತಮ್ಮ ಕೆಲಸಗಳಿಗೆ ರಜೆ ಹಾಕಿ, ಅವರಿಗೆ ವಹಿಸಿದ ಕಾರ್ಯವನ್ನು ನೆರವೇರಿಸಲು ತಮ್ಮ ಸ್ವಂತ ಸಮಯವನ್ನು ತ್ಯಾಗ ಮಾಡಿದರು. ಶಾಲೆಗಳ ಆಡಳಿತ ಮಂಡಳಿಯವರಿಂದ ಕೂಡಾ ಅಭೂತಪೂರ್ವ ಸ್ವಾಗತ ದೊರಕಿತು. ನೂರಾರು ಶಾಲೆಗಳು ಮುಂದೆ ಬಂದು, ತಾವಾಗಿಯೇ ಅಂದು ಲೈಟ್ ಚಾನಲಿಂಗ್ ಮಾಡುತ್ತೇವೆ ಎಂದು ಭರವಸೆ ನೀಡಿದವು. ಲೈಟ್ ಚಾನಲಿಂಗ್ ತಾವೇ ನಡೆಸಿಕೊಳ್ಳುವುದಕ್ಕೆ ಆಯಾ ಶಾಲೆಗಳಲ್ಲಿ ವಿದ್ಯಾರ್ಥಿ ಮುಖಂಡರುಗಳಿಗೆ ತರಬೇತಿ ನೀಡುವುದಕ್ಕೂ ನಮ್ಮ ಕಾರ್ಯಕರ್ತರು ಹೆಚ್ಚಿನ ಶ್ರಮವಹಿಸಿದರು. ಅನೇಕ ಕಾರ್ಯಕರ್ತರು ಬೆಳಗಿನಿಂದ ಸಾಯಂಕಾಲದವರೆಗೆ ಬಳಲಿಕೆ ಇಲ್ಲದೆ ಕೆಲಸ ಮಾಡಿದರು.

5ನೇ 'ವಿಶ್ವ ಚಾನಲ್ಸ್ ದಿನ'ವು ಮಾಸ್ಟರ್‌ಗಳ ಅನುಗ್ರಹದಿಂದಾಗಿ ಅಪೂರ್ವ ಯಶಸ್ಸನ್ನು ಕಂಡಿತು. ಬೆಳಿಗ್ಗೆ 6 ಗಂಟೆಗೆ ಏಕತೆಯ ತಂತ್ರದ ಅಭ್ಯಾಸ ಮತ್ತು 7 ನಿಮಿಷಗಳ ಲೈಟ್ ಚಾನಲಿಂಗ್‌ನೊಂದಿಗೆ ಆ ದಿನ ಆರಂಭವಾಯಿತು. ದಿನದ ಕೊನೆಯಲ್ಲಿ ಸಂಜೆ 6 ಗಂಟೆಗೆ 7 ನಿಮಿಷಗಳ ಲೈಟ್ ಚಾನಲಿಂಗ್ ನಂತರ ನಾವು ಋಷಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದೆವು. ಪ್ರತಿಯೊಂದು ತಂಡದಲ್ಲೂ ಪರಿಪೂರ್ಣ ಹೊಂದಾಣಿಕೆ ಮತ್ತು ಸಹಕಾರವು ಕಾಣುತ್ತಿತ್ತು. 195 ಶಿಸ್ತುಬದ್ಧ ಕಾರ್ಯಕರ್ತರ ಬಲಿಷ್ಠ ತಂಡವು ಅಸಾಧ್ಯವಾದುದನ್ನು ಸಾಧಿಸಿತು. ಅಂದು 2350 ಶಾಲೆಗಳಲ್ಲಿನ 11 ಲಕ್ಷಕ್ಕೂ ಹೆಚ್ಚು ಮಕ್ಕಳು ಲೈಟ್ ಚಾನಲ್ ಮಾಡಿದರು. ಎಲ್ಲಕ್ಕಿಂತ ಮಿಗಿಲಾಗಿ, ಒಂದು ತಂಡವಾಗಿ ಕೆಲಸ ಮಾಡುವುದೇ ಹೆಚ್ಚಿನ ಸಾಧನೆ ಎಂದು ನನಗನ್ನಿಸುತ್ತದೆ. ಸೆಷನ್‌ಗಳಲ್ಲಿ ಮಾಸ್ಟರ್‌ಗಳ ಇರುವಿಕೆ ಹಾಗೂ ಅನುಗ್ರಹವನ್ನು ಪ್ರತಿಯೊಬ್ಬರೂ ಅನುಭವಿಸಿದರು.

ಅನೇಕ ಶಾಲೆಗಳು ನಮಗೆ ಇಮೇಲ್‌ಗಳನ್ನು, ಫೋಟೋಗಳನ್ನು ಕಳುಹಿಸಿದರು ಮತ್ತು ಫೋನ್ ಮಾಡಿ ವಿಶ್ವ ಚಾನಲ್ಸ್ ದಿನದಂದು ತಾವು ಭಾಗವಹಿಸಿದ್ದನ್ನು ಕೂಡ ದೃಢಪಡಿಸಿದರು. ಬಿಡುವಿಲ್ಲದ ಕಾರ್ಯಕ್ರಮಗಳಿದ್ದರೂ ಸಹ ತಮ್ಮ ಅಮೂಲ್ಯವಾದ ಸಮಯ ಮತ್ತು ಸಹಕಾರವನ್ನು ನೀಡಿದ ಶಾಲಾ ಆಡಳಿತಾಧಿಕಾರಿಗಳಿಗೆ ನಮ್ಮ ಅತ್ಯಂತ ವಿನಯಪೂರ್ವಕ ಧನ್ಯವಾದಗಳು. ಅವರು ನಮ್ಮ ಈ ಸಂಚಲನದ ಬಹುಮುಖ್ಯ ಮತ್ತು ಅವಿಭಾಜ್ಯ ಅಂಗವಾಗಿದ್ದಾರೆ.

ಈ 'ವಿಶ್ವ ಚಾನಲ್ಸ್ ದಿನ'ದ ಉದ್ದೇಶವು ನಮ್ಮ ಭೂಮಿಯ ಮೇಲೆ ಹೆಚ್ಚು ಪ್ರೀತಿ ಮತ್ತು ಶಾಂತಿಯನ್ನು ತರುವುದಾಗಿದೆ. ದಿನಕಳೆದಂತೆ ಹೆಚ್ಚುಹೆಚ್ಚು ಜನರು ಈ ಸಂಚಲನವನ್ನು ಸೇರಲಿ ಮತ್ತು ಈ ಕನಸನ್ನು ಬೇಗ ನನಸಾಗಿಸಲಿ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

### ಸೋಲಾಪೂರ್

ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್


ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಸ್ ಮಹಾದಿಕ್

### ವಿಶಾಖಪಟ್ಟಣ

ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಷ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ದಿನಾಂಕ 7–11–2014 ರಂದು ಎಕ್ಸಲಂಟ್ ಶಾಲೆಯಲ್ಲಿ ಲೈಟ್ ಚಾನಲಿಂಗ್ ಸೆಷನ್ ನಡೆಸಲು ಹೋಗುತ್ತಿದ್ದಾಗ ಆ ರಸ್ತೆಯನ್ನು ದುರಸ್ತಿ ಮಾಡಲು ಅಗೆದಿರುವುದನ್ನು ನಾವು ಕಂಡೆವು. ಇದರಿಂದ ನನಗೆ ಕಾರನ್ನು ಸರಿಯಾಗಿ ಚಲಿಸುವುದಕ್ಕೆ ಆಗಲಿಲ್ಲ. ಕಾರಿನ ಮುಂದಿನ ಎಡಗಡೆಯ ಚಕ್ರ ಸುಮಾರು 2 ಅಡಿ ಆಳದಲ್ಲಿ ಸಿಕ್ಕಿ ಹಾಕಿಕೊಂಡಿತು. ನನಗೆ ಕಾರನ್ನು ಹೊರತರಲು ಸಾಧ್ಯವಾಗಲಿಲ್ಲ. ಆಗ ನಾನು ಗುರೂಜಿ ಮತ್ತು ಬೆಳಕನ್ನು ಸ್ಮರಿಸಿಕೊಂಡು ಸಹಾಯವನ್ನು ಬೇಡಿದೆ. ನಮ್ಮ ಕಾರಿನ ಹಿಂದೆ ಸ್ಕೂಟರಿನಲ್ಲಿ ಬರುತ್ತಿದ್ದವರು ನಮ್ಮ ಸಹಾಯಕ್ಕೆ ಬಂದರು. ತಕ್ಷಣವೇ ಎಲ್ಲಿಂದಲೋ ಸುಮಾರು 8–10 ಜನರು ಬಂದು, ಕಾರನ್ನು ಮುಂಭಾಗದಿಂದ ಮೇಲೆತ್ತಿಹಿಡಿದು, ನನಗೆ ಕಾರನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಹೇಳಿದರು. ಇದರಿಂದ ನಾನು ಸರಿಯಾದ ದಾರಿಗೆ ಬರುವಂತಾಯಿತು. ಅವರಿಗೆ ಕೃತಜ್ಞತೆ ಹೇಳುವ ಮೊದಲೇ ಅವರು ಅಲ್ಲಿಂದ ಹೋಗಿದ್ದರು. ನಮಗೆ ಮಧ್ಯಾಹ್ನ 2.30ಕ್ಕೆ ಲೈಟ್ ಚಾನಲಿಂಗ್ ಸೆಷನ್ ಇತ್ತು. ನಾವು ಸಮಯಕ್ಕೆ ಸರಿಯಾಗಿ ಶಾಲೆಯನ್ನು ತಲುಪಿ ಲೈಟ್ ಚಾನಲಿಂಗ್ ಸೆಷನ್‌ಅನ್ನು ನಡೆಸಿದೆವು!

–ರಮೇಶ್ ವಿ ಭೋಸೇಕರ್, ಕಾರ್ಯಕರ್ತ

ನಾನು ವಾರದಲ್ಲಿ 2 ಅಥವಾ 3 ಬಾರಿ ಲೈಟ್ ಚಾನಲ್ ಮಾಡುತ್ತೇನೆ. ಕೆಲವು ಸಲ ಮನೆಯಲ್ಲಿ ಓದಲು ಪ್ರಾರಂಭಿಸುವುದಕ್ಕೆ ಮೊದಲು ಲೈಟ್ ಚಾನಲ್ ಮಾಡುತ್ತೇನೆ. ಲೈಟ್ ಚಾನಲ್ ಮಾಡಿ ಓದಿದಾಗಲೆಲ್ಲಾ ಉತ್ತಮ ಅನುಭವವಾಗಿದೆ. ನನಗೆ ಹೆಚ್ಚು ಕಲಿಯಲು ಹಾಗೂ ನೆನಪಿನಲ್ಲಿಟ್ಟುಕೊಳ್ಳಲು ಸಾಧ್ಯವಾಗಿದೆ.

–ರೆಷ್ಮಿ, 9ನೇ ತರಗತಿ, ಸೇಂಟ್ ಮೇರಿಸ್ ಹೈಸ್ಕೂಲ್, ಗೆದ್ದಲಹಳ್ಳಿ, ಬೆಂಗಳೂರು

ಬೆಳಕು ನನ್ನನ್ನು ಶಾಂತಿ ಮತ್ತು ಸಮಾಧಾನದಿಂದ ಇರುವಂತೆ ಮಾಡಿದೆ. ದೇವರು ನನ್ನ ಆಧ್ಯಾತ್ಮಿಕ ಸಾಧನೆಯಲ್ಲಿ ಮುಂದುವರಿಯಲು ಬೆಂಬಲಿಸಿ ಸಹಾಯ ಮಾಡುತ್ತಾನೆಂದು ಅರಿತುಕೊಳ್ಳಲು ಇದು ಸಹಾಯ ಮಾಡಿದೆ. ನಾನು ಬೆಳಕನ್ನು ಚಾನಲ್ ಮಾಡುವಾಗ ನನ್ನ ದೇಹದಲ್ಲಿ ಚೈತನ್ಯಗಳು ಹಾದುಹೋಗುತ್ತಿರುವುದು ನಿಜವಾಗಿಯೂ ಅನುಭವವಾಗುತ್ತದೆ.

–ಶಾಲಿನಿ ಮೇರಿ, ಹತ್ತನೇ ತರಗತಿ, ಇಮಾನ್ಯುಯಲ್ ಸುಜ್ಞಾನ ಜ್ಯೋತಿ ಹೈಸ್ಕೂಲ್, ಬೆಂಗಳೂರು

ನಾನು ಬೆಳಕನ್ನು ಚಾನಲ್ ಮಾಡುವಾಗ, ತಲೆಯ ಮುಖಾಂತರ ನನ್ನ ದೇಹದೊಳಗೆ ಬೆಳಕು ಪ್ರವೇಶಿಸುತ್ತಿರುವುದಾಗಿ ಅನ್ನಿಸುತ್ತದೆ.

–ಅಬ್ದುಲ್, ಆರನೇ ತರಗತಿ, ಇಮಾನ್ಯುಯಲ್ ಸುಜ್ಞಾನ ಜ್ಯೋತಿ ಹೈಸ್ಕೂಲ್, ಬೆಂಗಳೂರು

ಬೆಳಕು ನನ್ನ ದೇಹ ಮತ್ತು ಕೈ ಕಾಲುಗಳನ್ನು ಪ್ರವೇಶಿಸಿ ಹಾದುಹೋಗುವುದನ್ನು ಅನುಭವಿಸಲು ನನಗೆ ಸಾಧ್ಯವಾಗಿದೆ. ಇದೊಂದು ತೀರ ವಿಭಿನ್ನ ಅನುಭವ. ಈ ದಿನ ಮುಂಜಾನೆ ನಾನು ಸ್ವಲ್ಪ ಆತಂಕಕ್ಕೆ ಒಳಗಾಗಿದ್ದೆ, ಆದರೆ ಬೆಳಕನ್ನು ಚಾನಲ್ ಮಾಡಿದ ನಂತರ ನನ್ನಲ್ಲಿ ಸಮಾಧಾನ ನೆಲೆಸಿ ಆತಂಕ ಮಾಯವಾಯಿತು. ಕೆಲವು ಸಂದರ್ಭಗಳಲ್ಲಿ ನಾನು ಕಣ್ಣು ಮುಚ್ಚಿ ಕುಳಿತಾಗ ಹಲವು ಬಣ್ಣದ ಬೆಳಕನ್ನು ನೋಡುತ್ತೇನೆ.

–ಶ್ರೀಮತಿ ಲಲಿತ, ಅಕೆಡೆಮಿಕ್ ಕೋಆರ್ಡಿನೇಟರ್, ಶ್ರೀ ರಾಮ ವಿದ್ಯಾಲಯ, ಜಕ್ಕೂರು, ಬೆಂಗಳೂರು

**ವಿಶ್ವ ಚಾನಲ್ಸ್ ದಿನವಾದ**
**ಜನವರಿ 30, 2015ರಂದು**
**11 ಲಕ್ಷಕ್ಕೂ ಹೆಚ್ಚು**
**ಜನರು ಬೆಳಕನ್ನು ಚಾನಲ್ ಮಾಡಿದರು**
**ನಿಮಗೆಲ್ಲರಿಗೂ ವಂದನೆಗಳು**

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ